## -: ವಾರ್ಡ್ ಸಮಿತಿ ಸಭೆ :-
## ದಿನಾಂಕ: 16.01.2021

ವಿಷಯ: ವಾರ್ಡ್ ಸಂಖ್ಯೆ 74 ಶಕ್ತಿಗಣಪತಿನಗರ ವಾರ್ಡ್ ಸಮಿತಿ ಸಭೆಯನ್ನು ಏರ್ಪಡಿಸಿರುವ ಬಗ್ಗೆ.
ಉಲ್ಲೇಖ: ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶ ಪತ್ರ ಸಂಖ್ಯೆ: ಬಿ12(5)/ಪಿ.ಆರ್/35/ 2020-21 ದಿನಾಂಕ: 21.09.2020

ದಿನಾಂಕ 16.01.2021 ರಂದು ಸಮಯ ಬೆಳಿಗ್ಗೆ 10.00 ಗಂಟೆಗೆ ವಾರ್ಡ್ ಸಂಖ್ಯೆ 74 ಶಕ್ತಿಗಣಪತಿನಗರ ವಾರ್ಡ್ ಸದಸ್ಯರ ಕಛೇರಿಯಲ್ಲಿ ವಾರ್ಡ್ ಸಮಿತಿ ಸಭೆಯನ್ನು ಮಾನ್ಯ ವಾರ್ಡ್ ಕಮಿಟಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

ಹಾಜರಿದ್ದ ಅಧಿಕಾರಿಗಳು:-

1. ಶ್ರೀ ಚಂದ್ರಶೇಖರ್ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, (ಅಧ್ಯಕ್ಷರು)
2. ಶ್ರೀ ಕೆ.ಬಿ. ದೇವರಾಜಯ್ಯ ಸಹಾಯಕ ಅಭಿಯಂತರರು, (ಕಾರ್ಯದರ್ಶಿ)
3. ಕುಮಾರಿ ಕೆ. ಸಮಂಜಸ ಸಹಾಯಕ ಅಭಿಯಂತರರು
4. ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ.
5. ಶ್ರೀ ಪ್ರದೀಪ್ ಕುಮಾರ್, ಹಿರಿಯ ಆರೋಗ್ಯ ಪರಿವೀಕ್ಷಕರು
6. ಶ್ರೀ ಕೆ. ಜಾಕಬ್, ಕಿರಿಯ ಆರೋಗ್ಯ ಪರಿವೀಕ್ಷಕರು
7. ಡಾ॥ ಕುಸುಮ,
8. ಪ್ರಕಾಶ್, ಬೀದಿ ದೀಪಗಳ ನಿರ್ವಹಣೆ,
9. ವೆಂಕಟೇಶ್, ಕಂದಾಯ ಪರಿವೀಕ್ಷಕರು
10. ಜಿ. ವೆಂಕಟೇಶ್ ಕಂದಾಯ ವಸೂಲಿಗಾರರು,
11. ಪ್ರಶಾಂತ್, ಮಾರ್ಷಲ್
12. ಶ್ರೀ ನಾಗರಾಜ್, ಸೂಪರ್‌ವೈಸರ್, ಘನತ್ಯಾಜ್ಯ ನಿರ್ವಹಣೆ,
13. ರಫೀಕ್ ಅಹಮದ್,

ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರು:-

1. ಶ್ರೀ ಬಿ.ಡಿ. ಶ್ರೀನಿವಾಸ್
2. ಶ್ರೀ ಕೆ.ಪಿ. ಅಶೋಕ್
3. ಶ್ರೀ ರವಿಕುಮಾರ್
4. ಶ್ರೀ ಜಿ. ಸತ್ಯನಾರಾಯಣ
5. ಶ್ರೀ ರಾಜೇಶ್ ಶಾಸ್ತ್ರಿ
6. ಶ್ರೀಮತಿ ಲಲಿತಮ್ಮ
7. ಶ್ರೀಮತಿ ಇಂದ್ರಮ್ಮ
8. ಶ್ರೀ ನಾಗರಾಜು
9. ಶ್ರೀ ಹೇಮಂತ್
10. ಎನ್.ಜಿ. ಗೋವಿಂದಯ್ಯ

. . . . . .2

Scanned with CamScanner

ಶ್ರೀ ಕೆ.ಬಿ. ದೇವರಾಜಯ್ಯ ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು ರವರು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಲಾಯಿತು. ಸಭೆಯಲ್ಲಿ ಈ ಕೆಳಕಂಡ ಅಂಶಗಳನ್ನು ಚರ್ಚಿಸಲಾಯಿತು.

1. ಘನತ್ಯಾಜ್ಯ ಸಮರ್ಪಕ ವಿಲೇವಾರಿ ಕೈಗೊಳ್ಳಲು ಕಿರಿಯ ಆರೋಗ್ಯ ಪರಿವೀಕ್ಷಕರುಗಳಿಗೆ ಸೂಚಿಸಲಾಯಿತು.
2. 3ನೇ ಮುಖ್ಯ ರಸ್ತೆ, 2ನೇ ಅಡ್ಡರಸ್ತೆ ಕಮಲಾನಗರ, 6ನೇ ಮುಖ್ಯ ರಸ್ತೆ, ಭುವನೇಶ್ವರಿನಗರ ದಲ್ಲಿ ನೀರಿನ ತೊಂದರೆ ಹೆಚ್ಚಾಗಿದ್ದು, ಈ ಬಗ್ಗೆ ಬಿ.ಡಬ್ಲ್ಯೂ.ಎಸ್.ಎಸ್.ಬಿ. ರವರ ಗಮನಕ್ಕೆ ತರಲು ಸೂಚಿಸಲಾಯಿತು.
3. ಬೆಸ್ಕಾಂ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಕೇಬಲ್ ಹಾಗೂ ಪೈಪ್ ಅಳವಡಿಸಲು ಗುಂಡಿಗಳನ್ನು ಹಾಗೂ ರಸ್ತೆಗಳನ್ನು ಅಗೆದಿದ್ದು, ಡಾಂಬರೀಕರಣ ಮಾಡದೇ ಹಾಗೆ ಬಿಟ್ಟಿರುವುದರಿಂದ ಸಾರ್ವಜನಿಕರ ಹಾಗೂ ವಾಹನಗಳ ಓಡಾಟಕ್ಕೆ ತುಂಬಾ ತೊಂದರೆಯಾಗುತ್ತಿದ್ದು ಈ ಬಗ್ಗೆ ಸದರಿ ಕಛೇರಿಗಳಿಗೆ ಪತ್ರ ಬರೆಯಲು ತೀರ್ಮಾನಿಸಲಾಯಿತು.
4. ಕಮಲಾನಗರ 4ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ ಹಾಗೂ 5ನೇ ಅಡ್ಡರಸ್ತೆಯಲ್ಲಿ ರಸ್ತೆ ಗುಂಡಿಗಳು ಏರ್ಪಟ್ಟಿದ್ದು ಅವುಗಳನ್ನು ಮುಚ್ಚಿಸಲು ಕೋರಿರುತ್ತಾರೆ.
5. ಕಮಲಾನಗರ 3ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆಲ್ಲಿ ಬೀದಿ ಬದಿಯ ವಿದ್ಯುತ್ ಕಂಬ ಹಾಳಾಗಿದ್ದು ಬದಲಾಯಿಸಿಕೊಡಲು ಕೋರಿರುತ್ತಾರೆ.
6. ಬೀದಿ ದೀಪಗಳ ನಿರ್ವಹಣೆ ಸರಿಯಾಗಿ ಆಗುತ್ತಿರುವುದಿಲ್ಲ ಹಾಗೂ ನಿಗದಿತ ಸಮಯದಲ್ಲಿ ಉರಿಸುತ್ತಿಲ್ಲ ಎಂದು ದೂರು ನೀಡಿದ್ದು, ಈ ಬಗ್ಗೆ ವಿದ್ಯುತ್ ವಿಭಾಗಕ್ಕೆ ತಿಳಿಸಲು ಸೂಚಿಸಿರುತ್ತಾರೆ.
7. ಪಾಲಿಕೆ ವತಿಯಿಂದ 24.10% ರ ಅನುದಾನದಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದವರಿಗೆ ವೈಯಕ್ತಿಕ ಮನೆ ನಿರ್ಮಿಸಿಕೊಳ್ಳಲು ಶ್ರೀ ಅಕ್ಬರ್ ಖಾನ್ ಬಿನ್ ಗೌಸ್ ಖಾನ್ ನಂ. 665 ಕಸ್ತೂರಿ ಲೇಔಟ್ ಕಮಲಾನಗರ ರವರಿಗೆ ಅನುಮೋದನೆ ದೊರೆತಿರುತ್ತದೆ. ಆದರೆ ಸದರಿಯವರು ಪ್ರಸ್ತುತ ಮನೆ ನಿರ್ಮಿಸಿಕೊಳ್ಳಲು ಸಾಧ್ಯವಾಗದ ಕಾರಣ ಅನುಮತಿ ಪತ್ರವನ್ನು ರದ್ದುಗೊಳಿಸಲು ಕೋರಿರುತ್ತಾರೆ.
8. ಪಾಲಿಕೆ ವತಿಯಿಂದ 24.10% ರ ಅನುದಾನದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ವೈಯಕ್ತಿಕ ಮನೆ ನಿರ್ಮಿಸಿಕೊಳ್ಳಲು ಶ್ರೀ ಎಂ.ಬಿ. ನಾಗರಾಜ್, ನಂ. 146, ಚಂದ್ರಾನಗರ ರವರಿಗೆ ಅನುಮೋದನೆ ದೊರೆತಿರುತ್ತದೆ. ಆದರೆ ಸದರಿಯವರು ಪ್ರಸ್ತುತ ಮನೆ ನಿರ್ಮಿಸಿಕೊಳ್ಳಲು ಸಾಧ್ಯವಾಗದ ಕಾರಣ ಅನುಮತಿ ಪತ್ರವನ್ನು ರದ್ದುಗೊಳಿಸಲು ಕೋರಿರುತ್ತಾರೆ.
9. ಶ್ರೀ ಇ ಭಾಸ್ಕರ್ ನಂ. 198, ವೃಷಭಾವತಿನಗರ ರವರು ಪಾಲಿಕೆ ವತಿಯಿಂದ 24.10% ರ ಅನುದಾನದಲ್ಲಿ ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದವರಿಗೆ ವೈಯಕ್ತಿಕ ಮನೆ ನಿರ್ಮಿಸಿಕೊಳ್ಳಲು ಅನುದಾನ ಕೋರಿರುತ್ತಾರೆ.
10. ಶ್ರೀಮತಿ ಚೈತ್ರ ಕೆ. ನಂ. 607, ಕಮಲಾನಗರ ರವರು ಪಾಲಿಕೆ ವತಿಯಿಂದ 24.10% ರ ಅನುದಾನದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ವೈಯಕ್ತಿಕ ಮನೆ ನಿರ್ಮಿಸಿಕೊಳ್ಳಲು ಅನುದಾನ ಕೋರಿರುತ್ತಾರೆ.
11. ಈಗಾಗಲೇ ಮಂಜೂರಾಗಿರುವ ಅಕ್ಬರ್ ಖಾನ್ ರವರ ಬದಲಾಗಿ ಶ್ರೀ ಇ. ಭಾಸ್ಕರ್ ರವರಿಗೆ ಅನುದಾನ ಬದಲಾಯಿಸಿಕೊಡಲು ಹಾಗೂ ಶ್ರೀ ಎಂ.ಬಿ. ನಾಗರಾಜ್ ರವರ ಬದಲಾಗಿ ಶ್ರೀಮತಿ ಚೈತ್ರ ಕೆ. ರವರಿಗೆ ವೈಕ್ತಿಕ ಮನೆ ನಿರ್ಮಿಸಿಕೊಳ್ಳಲು ಅನುದಾನ ನೀಡಲು ಮೇಲಾಧಿಕಾರಿಗಳಿಗೆ ಮಂಡಿಸಲು ತೀರ್ಮಾನಿಸಲಾಯಿತು.

ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಎಲ್ಲಾ ಇಲಾಖೆಗಳು ಪರಸ್ಪರ ಚರ್ಚಿಸಿ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು ಎಂದು ಸೂಚಿಸಿದರು.

ಸಹಾಯಕ ಅಭಿಯಂತರರು
ಮತ್ತು ಕಾರ್ಯದರ್ಶಿಗಳು,
ವಾರ್ಡ್ ನಂ. 74 ಶಕ್ತಿಗಣಪತಿನಗರ

16/1/2021
ಅಧ್ಯಕ್ಷರು
ವಾರ್ಡ್ ಕಮಿಟಿ, ವಾರ್ಡ್ ಸಂಖ್ಯೆ 74,
ಶಕ್ತಿಗಣಪತಿನಗರ

Scanned with CamScanner